೧೮

ರಾಷ್ಟ್ರಕೂಟರ ನಂತರ ಗಂಗರಾಜ್ಯ ದುರ್ಬಲವಾಯಿತು. ಚಾಮುಂಡರಾಯ ಶಸ್ತ್ರಸನ್ಯಾಸ ತೆಗೆದುಕೊಂಡು ಶ್ರವಣ ಬೆಳಗೊಳದಲ್ಲಿ ಗೊಮ್ಮಟ ಮಹಾಮೂರ್ತಿಯ ಪಾದಮೂಲದಲ್ಲಿ ಆತ್ಮಚಿಂತನೆ ಮಾಡಲು ಕುಳಿತನು. ಸಮರಪರಶುರಾಮ ಖಡ್ಗ ಕೆಳಗಿಟ್ಟುದನ್ನು ಕೇಳಿ ಮಾಳವದ ಪರಮಾರರಲ್ಲಿ ಸುಪ್ತವಾಗಿದ್ದ ರಾಜ್ಯದಾಹ ಹೆಡೆಯಾಡುವಂತಾಯಿತು !ಕನ್ನಡನಾಡಿಗೆ ಅವರು ಮದಗಜದ ಹಿಂಡಿನಂತೆ ನುಗ್ಗಿ ಬಂದರು. ಕೈಗೆ ಸಿಕ್ಕಿದನ್ನು ದೋಚಿಕೊಂಡರು. ಕಾಲಿಗೆ ಸಿಕ್ಕಿದ್ದನ್ನು ತೊತ್ತುಳತುಳಿದು ಚಾಲುಕ್ಯ ಸಾಮ್ರಾಜ್ಯವನ್ನು ಕಬಳಿಸಲು ಮುಂದುವರೆದರು. ಇರಿವಬೆಂಡಗ ಗೋದಾವರಿಯನ್ನು ದಾಟಿಬಂದ ಪರಮಾರರನ್ನು ಎದುರಿಸಿದನು. ಸರ್ವಸೇನಾಧಿಪತಿಯಾದ ಅಣ್ಣಿಗನೂ ಇರಿವಬೆಡಗಂನ ಬಲಗೈಯಾಗಿ ಪರಮಾರರ ಮೇಲೆ  ಹೋರಾಡಿದನು. ಯುದ್ಧದಲ್ಲಿ ಚಾಲುಕ್ಯರಿಗೆ ಜಯವೇನೋ ಆಯಿತು. ಈ ವೇಳೆಗೆ ಸರಿಯಾಗಿ ಮಳೆಗಾಲ ಪ್ರಾರಂಭವಗಿ ಗೋದಾವರಿಯಲ್ಲಿ ಮಹಾಪುರ ಬಂದಿತು. ನದಿಯ ಇನ್ನೊಂದು ಬದಿಯಿಂದ ಚಾಲುಕ್ಯರ ಸೇನೆಗೆ ಆಹಾರ ಸಾಮಗ್ರಿ ಮತ್ತು ಯುದ್ಧೋಪ ಕರಣಗಳು ಪೂರೈಸಬೇಕಾಗಿತ್ತು. ಮಹಾಪೂರ ಬಂದು ಚಾಲುಕ್ಯರ ಸೇನೆ ದಿಕ್ಕೆಟ್ಟಿತು. ಎಲ್ಲ ಸರಬರಾಜು ನಿಂತುಹೋಯಿತು. ಈ ಗುಟ್ಟು ಪರಮಾರರಿಗೆ ತಿಳಿದು ಮತ್ತೊಮ್ಮೆ ಚಾಲುಕ್ಯರ ಮೇಲೆ ಬೀಳಲು ಸಂಕಲ್ಪಮಾಡಿದರು. ದಾರಿಯಲ್ಲಿದ್ದ ಊರುಗಳನ್ನು ದೋಚಿ ತಮಗೆ ಬೇಕಾದುದನ್ನೆಲ್ಲ ಒದಗಿಸಿಕೊಂಡು.

ಪರಮಾರರು ಬಾಲ ಮುಂದುರಿಕೊಂಡು ಹೋಗಿದ್ದವರು ಮತ್ತೊಮ್ಮೆ ರಣೋತ್ಸಾಹದಿಂದ ಗೋದಾವರಿಯ ಕಡೆ ಹೊರಟರು. ಚಾಲುಕ್ಯರಿಗೂ ಪರಮಾರರಿಗೂ ಆರುಮೈಲಿ ಅಂತರ ಉಳಿಯಿತು ! ಚಾಲುಕ್ಯರೆಲ್ಲ ಬರಿಗೈಯಾಗಿ ಕಣ್ ಬಾಯಿ ಬಿಡುತ್ತಿದ್ದರೆ ಇತ್ತ ಪರಮಾರರು ನವಚೈತನ್ಯವನ್ನು ಪಡೆದು ಕೇಕೆ ಹಾಕುತ್ತಿರುವರು !

ಇವರು ಬೀಡುಬಿಟ್ಟಿದ್ದ ಬಯಲಿನಲ್ಲಿ ಒಂದು ಪಲ್ಲಕ್ಕಿ ಯನ್ನು ಯಾರೋ ರಾಜ ಭಟರು ಹೊತ್ತುಕೊಂಡು ಬಂದರು. ಹದಿನೈದು ಇಪ್ಪತ್ತು ಜನ ಕಾಪಿನಾಳುಗಳಿದ್ದರು. ಮಾಳವ ಸೈನಿಕರು

ಪಲ್ಲಕ್ಕಿಯನ್ನು ತಡೆದು “ಎಲ್ಲಿಂದ ಬಂದಿರಿ ?ಎಲ್ಲಿಗೆ ಹೋಗ ಬೇಕು ? ಒಳಗೆ ಯಾರಿರುವರು ?” ಎಂದು ಪ್ರಶಿಸಿದರು.

“ನಾವು ಲಕ್ಕುಂಡಿಗೆ ಹೋಗಬೇಕಾಗಿದೆ. ಒಳಗಡೆ ಅಣ್ಣಿಗದೇವನ ಮಾತೆ ಅತ್ತಿಮಬ್ಬೆ ಇರವರು” ಎಂದು ಉತ್ತರಕೊಟ್ಟು ಕೂಡಲೆ ಮಾಳವರ ಕಿವಿ ನಿಮಿರಿತು. ಈಕೆಯನ್ನು ಹಿಡಿದು ಸೆರೆಹಾಕಿದರೆ ಚಾಲುಕ್ಯರು ತಾವಾಗೇ ಸಂಧಿಗೆ ಬರುವರು. ಅಷ್ಟೋ ಇಷ್ಟೋ ಗಿಲುಬಹುದು ಎಂದು ಯೋಚಿಸಿ ತಮ್ಮ ಸೇನಾನಿಗೆ ಸುದ್ದಿ ಮುಟ್ಟಿಸಿದರು. ಅವನೂ ಅವಸರವಾಗಿ ಬಂದು ಪಲ್ಲಕ್ಕಿಯನ್ನು ಇಲಿಸುವಂತೆ ಕೂಗಿದನು .ಕಾಪಿನಾಳುಗಳು ಕತ್ತಿ ಹಿರಿದು ಪಲ್ಲಕ್ಕಿಯನ್ನು ಬಳಸಿಕೊಂಡು ನಿಂತರು. ಅತ್ತಿಮಬ್ಬೆ ಅದರ ಬಾಗಿಲು ತೆಗೆದು “ನಮ್ಮನ್ನು ತಡೆದವರಾರು?” ಎಂದು ಪ್ರಶ್ನಿಸಿದಳು.

“ಯಾಕೆ ನಾವು ! ಮಾಳವ ಸಾಮ್ರಾಜ್ಯದ ಸೇನಾನಿ ನಾನು ,ನೀನು ಕೂಡಲೇ ಕೆಳಗಿಳಿದು ನಮ್ಮ ವಶಳಾಗಬೇಕು.” ಎಂದು ಒರಟಾಗಿ ಕೂಗಿದನು.

“ನಾನೇಕೆ ಕೆಳಗಿಳಿಯಬೇಕು. ?ಏಕೆ ನಿಮ್ಮ ವಶವಗಬೇಕು ?” ಅತ್ತಿಮಬ್ಬೆ ಹುಬ್ಬುಗಂಟು ಹಾಕಿದಳು.

“ಏನು ನೋಡುವುದು, ಎರಡು ಬಿಗಿರಿಯಿರಿ. ಅವಳನ್ನು ಮುಂದಲೆ ಹಿಡಿದು ಕೆಳಗೆಳೆಯಿರಿ !” ಎಂದು ಮಾಳವ ಸೇನಾಧಿಪತಿ ತನ್ನ ಸೈನಿಕರಿಗೆ ಅಪ್ಪಣೆಕೊಟ್ಟನು.

“ಪಲ್ಲಕ್ಕಿಯನ್ನು ಕೆಳಗಿಳಿಸಿಬಿಡಿ. ನೀವೆಲ್ಲ ಧೈರ್ಯವಾಗಿರಿ” ಎಂದು ಅತ್ತಿಮಬ್ಬೆ ತನ್ನ ಭಟರಿಗೆ ತಿಳಿಸಿದಳು. ಪಲ್ಲಕ್ಕಿಯನ್ನು ಅವರು ಕೆಳಗಿಸಿದರು.ಅತ್ತಿಮಬ್ಬೆ ಅದರಿಂದ ಹೊರಗೆ ಬಂದು ಧೈರ್ಯವಾಗಿ ಅವರ ಮುಂದೆ ನಿಂತುಕೊಂಡಳು. “ನನ್ನನ್ನು ಸೆರೆಹಿಡಿಯುವಿರೇನು ? ಯಾವ ಅಪರಾಧಕ್ಕಾಗಿ ?” ಎಂದು ಅತ್ತಿಮಬ್ಬೆ ಸ್ವಲ್ಪವೂ ಅಳುಕದೆ ಪ್ರಶ್ನಿಸಿದಳು.

“ಅಪಾರಾಧವೇ ಒಂದಲ್ಲ ನೂರಾರಿವೆ. ನಿನ್ನ ಮಗ ನಮ್ಮಲ್ಲಿ ನೂರಾರು ಜನರನ್ನು ಕೊಂದಿರುವನು. ಅವನೊಬ್ಬ ಇಲ್ಲವೇ ಹೋಗಿದ್ದರೆ ಅಖಂಡ ಕರ್ಣಾಟಕವೆಲ್ಲ ನಮ್ಮದೇ ಆಗುತ್ತಿತ್ತು !” ಎಂದು ಸೇನಾನಿ ಔಡುಗಚ್ಚಿದನು.

“ನನ್ನ ಮಗ ನಿನ್ನಂತೆ ಸೇನಾಧಿಪತಿಯಾಗಿರುವನು. ಅವನ ಕರ್ತವ್ಯವನ್ನು ಅವನು ಮಾಡಿರುವನು. ಚಾಲುಕ್ಯರ ಸೇನೆಯಲ್ಲೂ ನಿನ್ನಿಂದ ಹತರಾಗಿರುವವರು ಯಾರೂ ಇಲ್ಲವೆ ? ನಿಮ್ಮ ರಾಜಕೀಯ ನಿಮ್ಮ ನಿಮ್ಮಲ್ಲೇ ಇರಲಿ. ಹೆಂಗಸರನ್ನೂ. ಮಕ್ಕಳನ್ನೂ ಕಾಡಬೇಡಿ” ಎಂದು ಅತ್ತಿಮಬ್ಬೆ ಬುದ್ಧಿ ಹೇಳಿದಳು.

“ವಾರೆವ, ನೀನೂ ಚತುರೆ !?” ಎಂದು ವ್ಯಂಗ್ಯವಾಗಿ ನುಡಿದು ‘ನುಗ್ಗಿ ಹಿಡಿಯಿರೋ !” ಎಂದು ತನ್ನ ಭಟರಿಗೆ ಆಜ್ಞಾಪನೆಯಿತ್ತನು. ಅವರು ಪಲ್ಲಕ್ಕಿಯನ್ನು ಸುತ್ತುಗಟ್ಟಿದರು. ಅತ್ತಿಮಬ್ಬೆ ಹುಬ್ಬುಗಂಟು ಹಾಕಿದಳು.“ಮುಂದುವರಿದೀರಿ ಜೋಕೆ ! ಹೆಂಗಸರನ್ನೂ ,ಮಕ್ಕಳನ್ನೂ, ನಿರಪರಾಧಿಗಳನ್ನೂ ಕೊಂದು ಕಟ್ಟುವ ನಿಮ್ಮ ಸಾಮ್ರಾಜ್ಯಕ್ಕೆ ಧಿಕ್ಕಾರ !” ಎಂದು ಅತ್ತಿಮಬ್ಬೆ ಅಬ್ಬರಿಸಿದಳು. ಮಾಳವರು ಮೇಲೆಬಿದ್ದು ಅತ್ತಿಮಬ್ಬೆಯನ್ನು ಮುಟ್ಟಲು ಬಂದಾಗ ಆಕೆ ಪ್ಯೂಜಿಯಾಮ ಪರ್ವತದಂತೆ ಕೋಪೋದ್ರಿಕ್ತಳಾಗಿ ತನ್ನ ಪಾದದಡಿ ಇದ್ದ ಮಣ್ಣಲ್ಲಿ ಒಂದುಹಿಡಿ ಹಿಡಿದುಕೊಂಡು ಮಾಳವ ಭಟರ ಮೇಲೆ ಎರಚಿದಳು. ನೂರಾರು ಸಿಡಿಲುಗಳು ಒಂದಕ್ಕೊಂದು ಹೊಸೆದು ಕೊಂಡು ನುಗ್ಗಿದಂತಯಿತು ! ಶತ್ರುಪಕ್ಷಕ್ಕೆ ಅವು ಸಿಡಿಲಾದರೆ ಸ್ವಪಕ್ಷಕ್ಕೆ ಚಂದ್ರಕಿರಣವಾಗಿ ಮೊಳಗಿದವು ! ಅಲ್ಲಿಂದ ಮಾಳವರೆಲ್ಲ ವಿದ್ಯುತ್ ತಾಕಿದಂತಾಗಿ ಮೂರ್ಛೆಗೆ ಸಂದರು ! ಅತ್ತಿಮಬ್ಬೆ ತನ್ನ ಭಟರನ್ನೆಲ್ಲ ಕರೆದು ಪಲ್ಲಕ್ಕಿಯನ್ನು ಸುತ್ತುವರಿಯುವಂತೆ ತಿಳಿಸಿದಳು. ಭಟರೆಲ್ಲ ಪ್ರಾಕಾರವಾಗಿ ಸುತ್ತುವರೆದರು. ಅತ್ತಿಮಬ್ಬೆ ಪಂಚನಮಸ್ಕಾರವನ್ನು ಜಪಿಸುತ್ತ ಪಲ್ಲಕ್ಕಿಗೆ ಬಲವಂದಳು. ಭಟರನ್ನೂ ಒಳಗೆ ಸೇರಿಸಿಕೊಂಡು ಪಲ್ಲಕ್ಕಿಯ ಸುತ್ತ ಒಂದು ಜ್ವಾಲವರ್ತುಳ ಏರ್ಪಟ್ಟಿತು ! ಒಳಗಿದ್ದ ಭಟರಿಗೆಲ್ಲ ಚಂದ್ರಕಳೆದು ನಡುವಿರುವಂತೆ ಭಾಸವಾಯಿತು. ಮತ್ತೆ ಇವರನ್ನು ಮುತ್ತಲು ಬಂದ ಮಾಳವರಿಗೆ ಜ್ವಾಲಾವರ್ತುಳದ ಗರಗಸದ ತೀಕ್ಷ್ಣತೆ ತಟ್ಟಿ ತಬ್ಬಿಬ್ಬಾದರು ! ಅತ್ತಿಮಬ್ಬೆ ಮತ್ತೆ ಪಲ್ಲಕ್ಕಿ ಏರಿದಳು. ಪಲ್ಲಕ್ಷಿ  ಹಾಗು ಭಟರನ್ನು ಬಳಸಿಕೊಂಡಿದ್ದ ಮಿಂಚಿನ ವರ್ತುಳವೂ ಪಲ್ಲಕ್ಕಿ ಮುಂದುವರಿದಂತೆ ತಾನೂ ಮುಂದುವರಿಯಿತು.

ಒಂದೆರಡು ಘಳಿಗೆ ಪ್ರಯಾಣ ಮಾಡಿ ಅತ್ತಿಮಬ್ಬೆ ಗೋದಾವರಿಯ ತಡಿಗೆ ಬಂದಳು. ಚಾಳುಕ್ಯಸೇನೆ ಕಂಗೆಟ್ಟು ಕಳವಳಿಸುತ್ತಿತ್ತು. ಚಾಳುಕ್ಯ ಸೇನೆ ತಂಗಿದ್ದ ಬಯಲಿನಲ್ಲಿ ಅತ್ತಿಮಬ್ಬೆ

ಕೆಳಗಿಳಿದು ಮಂತ್ರವನ್ನು ಜಪಿಸುತ್ತ ಮಾಳವರಿಗೆ ಅಡ್ಡವಾಗಿ ದಿಗ್ ಬಂದನವಸಗಿದಳು. ಇಲ್ಲೂ ಮಿಂಚಿನ ಅಡ್ಡಗೋಡೆ ಮೇಲೆದ್ದು ಚಾಳುಕ್ಯ ಸೇನೆಗೆ ವಜ್ರದ ಕೋಟೆಯಾಗಿ ಕಂಗೊಳಿಸಿತು.! ಈ ವಿಚಿತ್ರವನ್ನು ಕಂಡು ಸೇನೆಯೆಲ್ಲ ಬೆರಗಯಿತು. ಇರಿವಬೆಡಂಗ ಸೇನಾನಿಯಾದ ಅಣ್ಣಿಗನನ್ನು ಜೊತೆಗೆ ಕರೆದುಕೊಂಡು ಗಾಬರಿಯಿಂದ ಬಂದನು. ಪವಾಡವನ್ನು ನೋಡಿ ಇನ್ನೂ ಗಾಬರಿಗೊಂಡನು. ಮೊದಲೇ ಹೆದರಿದ್ದವನ ಮೇಲೆ ಹಾವು ಬಿದ್ದಂತಾಯಿತು. ! ಹಿಂದಕ್ಕೆ ಹೋಗಲು ನದಿ ತುಂಬಿ ಹರಿಯುತ್ತಿದೆ. ಅದಕ್ಕಿಳಿದ ಆನೆಗಳೂ ಇರುವೆಗಳಂತೆ ಕೊಚ್ಚಿ ಹೋಗುವುವು. ಮುಂದಕ್ಕೆ ಹೋಗೋಣವೆಂದರೆ ಮಿಂಚಿನ ವರ್ತುಳ. ಅದಕ್ಕೂ ಮುಂದೆ ಮಾಳವರ ಸೇನೆ ! ಮಾಳವ ಸೇನೆಯ ಕೋಲಾಹಲ ಇವರಿಗೂ ಕೇಳಿಸುವಂತೆದೆ. ಎಲ್ಲರೂ ಶತ್ರುಗಳ ಕೈಲಿ ಸಿಕ್ಕಿ ಒದ್ದಾಡಬೇಕಾಯಿತಲ್ಲ ಎಂದು ಇರಿವಬೆಡಂಗ ಕಂಗಾಲಾದನು. ಅಣ್ಣಿಗೆ ದಿಕ್ಕೆಟ್ಟನು. ಇಕ್ಕಳದಲ್ಲಿ ಸಿಕ್ಕಿದವರಂತೆ ಚಡಪಡಿಸಿದರು. ! ಆ ವೇಳೆಗೆ ಸರಿಯಾಗಿ ಒಂದು ಪಲ್ಲಕ್ಕಿ ಅಲ್ಲಿಗೆ ಬಂದಿತು. ಅಚ್ಚರಿಗೊಂಡು ಇವರಿಬ್ಬರೂ ಮಿಕಿಮಿಕಿ ನೋಡುವಾಗ ಪಲ್ಲಕ್ಕಿಯ ಬಾಗಿಲು ತೆರೆಯಿತು. ಅತ್ತಿಮಬ್ಬೆ ನಗುಮುಖದಿಂದ ಕೆಳಗಿಳಿದು ಬಂದಳು ! ಆಕೆಯ ಗುರುತು ಹತ್ತಿ ಹೋದ ಪ್ರಾಣ ಬಂದವನಂತೆ ಹಿಗ್ಗಿ ಇರಿವಬೆಡಂಗ ಮುನ್ನುಗ್ಗಿದನು.

"ಅಕ್ಕ ಎಂಥ ಸಮಯಕ್ಕೆ ಬಂದೆ ತಾಯಿ !" ಎಂ,ದು ಆಕೆಯ ಪದತಲದಲ್ಲಿ ದೊಪ್ಪನೆ ಕುಸಿದನು. ಹಣೆಯನ್ನು ಆಕೆಯ ಪಾದರವಿಂದದಲ್ಲಿ ಅದ್ದಿದನು. ಅಣ್ಣಿಗ ನಂತು ವಿಸ್ಮಯಕ್ರಾಂತಾಗಿ ಬಂದು ತಾಯ ಕಾಲ ಮೇಲೆ ಬೀಳಲು ಯತ್ನಿಸಿದನಾದರೂ ಈಗಾಗಲೇ ಅಲ್ಲಿ ಬಿದ್ದಿದ್ದ ಇರಿವಬೆಡಂಗನನ್ನು ಕಂಡು ನಿಂತುಕೊಂಡೇ "ಅಮ್ಮಾಜಿ, ನಾವೆಲ್ಲ ಅಪಾಯಕ್ಕೆ ಸಿಕ್ಕಿದ್ದೇವೆ !ರಣರಂಗಕ್ಕೆ ತಾವು ಏಕೆ ಬಂದಿರೋ ಏನೋ ! ಮಾಳವರು ಮಹಾ ನೀಚರು. ಏನು ಮಾಡುವುದಕ್ಕೂ ಹೇಸುವುದಿಲ್ಲ" ಎಂದು ಅಣ್ಣಿಗ ಗಾಬರಿಗೊಂಡು ನುಡಿದು ಅತ್ತಿಮಬ್ಬೆ ಇರಿವಬೆಡಂಗನನ್ನು ಮೇಲೆತ್ತಿ ಅವನ ಮೈಗೆ ಅಂಟಿದ್ದ ಧೂಳನ್ನು ಕೊಡವಿದಳು. ಅಣ್ಣಿಗನ ತಲೆಯನ್ನು ನೇವರಿಸಿದಳು. ನಮ್ಮಲ್ಲಿ ಯುದ್ಧಮಾಡಲು ಏನೊಂದು ಉಳಿದಿಲ್ಲ .ಒಟ್ಟಾರೆ ಅಪ್ಪಾಯಕ್ಕೆ ಸಿಕ್ಕಿರುವೆವು !" ಎಂದು ತಳಮಳಗೊಂಡನು.

"ಅಣ್ಣಿಗೆ, ನಾನಿರುವ ತನಕ ಕನ್ನಡ ಸಾಮ್ರಾಜ್ಯ ಕನ್ನಡಿಗರ ಕೈಲೇ ಇರುವುದು ! ನಾನಿರುವಾಗ ನಿನಗೂ ಇರಿವಬೆಡಂಗನಿಗೂ ಅಪಾಯವೆಂದೇರೇನು ? ಚೋಳರೇ ಅಲ್ಲ ಭರತಖಂಡದ ರಾಜಮಾಹಾರಾಜರೆಲ್ಲ ಒಟ್ಟಾಗಿ ಬಂದರೂ ನನ್ನನ್ನು ಕೆಣಕಲಾರರು. ಸೈನ್ಯಕ್ಕೆ ಧೈರ್ಯ ಹೇಳಿ ಬನ್ನಿ, ಈಮಿಂಚಿನ ಅಡ್ಡಗೋಡೆಯನ್ನು ಶತ್ರುಗಳು ಸಮೀಪಿಸಿದರೆ ದಹಿಸಿಹೋಗುವರು" ಎಂದು ಅತ್ತಿಮಬ್ಬೆ ತಿಳಿಸಿದಳು.

'ಅಮ್ಮಾಜಿ, ಏನಾದರೂ ಮಾಡಿ ಗೋದಾವರಿಯನ್ನು ಸಮಾಧಾನ ಮಾಡಲಾರೆಯ ?" ಎಂದು ಅಣ್ಣಿಗೆ ಗೋಗರೆದನು.

"ನೀವೇನೂ ಹೆದರಬೇಡಿ. ನದಿ ದಾಟಲು ಸಿದ್ಧಮಾಡಿಕೊಳ್ಳಿ" ಎಂದು ಅತ್ತಿಮಬ್ಬೆ ಧೈರ್ಯ ಹೇಳಿ ಮಗನನ್ನೂ ಇರಿವಬೆಡಂಗನನ್ನೂ ಕಳಿಸಿಕೊಟ್ಟಳು. ಅತ್ತಿಮಬ್ಬೆ ಬಂದಿರುವಳೆಂಬ ಸುದ್ದಿ ಚಾಲುಕ್ಯ ಸೇನೆಯಲ್ಲ ಕೇಳುವಂತೆ ಡಂಗುರ ಸಾರಿದರು !ಸೈನಿಕರಲ್ಲಿ ಒಬ್ಬೊಬ್ಬನಿಗೂ ಭೀಮಬಲ ಬಂದಂತಾಯಿತು !

ಶತ್ರುಗಳು ಚಾಲುಕ್ಯ ಸೇನೆಯನ್ನು ಮುಟ್ಟುವಂತೆ ಬಂದರಾದರೂ ಮಿಂಚಿನ ಅಡ್ಡಗೋಡೆಯಿಂದ ಜ್ವಾಲೆ ನುಗ್ಗಿ ನೂರಾರು ಗಜದ ತನಕ ತನ್ನ ನಂಜಿನ ನಾಲಿಗೆಯನ್ನು ಅಡಿಸಿತು ! ಹಿಂದಾಗಲೇ ಕೆಲವರು ಅತ್ತಿಮಬ್ಬೆಯ ಪವಾಡದ ಕೆಂಡಗಳ ಸವಿಯನ್ನು ಉಂಡು ಕಂಗೆಟ್ಟಿದ್ದರು. ಮತ್ತೆ ಕೆಣಕುವ ಧೈರ್ಯ ಸಾಲದೆ ಮಿಂಚಿನ ಅಡ್ಡಗೋಡೆಗೆ ದೂರವಾಗೆ ನಿಂತು ಚಾಲುಕ್ಯ ಸೇನೆಯನ್ನು ನೋಡುತ್ತ ಕುಳಿತರು !

ಚಾಲುಕ್ಯರು ಏನೂ ಆಗಿಲ್ಲವೇನೋ ಎಂಬಂತೆ ಚೆನ್ನಾಗಿ ಉಂಡರು. ಮರದಡಿ ವಿಶ್ರಮಿಸಿಕೊಳ್ಳುತ್ತ ಕುಳಿತರು ! ಬಿಸಿಲು ಕಂದುತ್ತ ಬಂದಿತು. ಚಾಲುಕ್ಯ ಸೇನಯೆಲ್ಲ ನದಿಯನ್ನು ದಾಟಲು ಸನದ್ಧವಾಯಿತು. ಒಂದು ರಥದಲ್ಲಿ ಜಿನಬಿಂಬವನ್ನು ಕೂರಿಸಿದರು. ನೂರರು ಸೊಡರುಗಳನ್ನು ಹತ್ತಿಸಿದರು. ಹೂಗೊಂಚಲಿಂದ ರಥವನ್ನು ಸಿಂಗರಿಸಿ ಹೂವಿನ ತೇರು ಮಾಡಿದರು ! ಅತ್ತಿಮಬ್ಬೆ ರಥವೇರಿದಳು. ಜಿನಮೂರ್ತಿಯ ಬಳಿ ನಮ್ರಳಾಗಿ ಕುಳಿತಳು. ಅತ್ತ ಇತ್ತ ಅಣ್ಣಿಗನೂ ಇರಿವಬೆಡಂಗನೂ ಅಬ್ಬೆಯ ಪಕ್ಕದಲ್ಲಿ ಕುಳಿತರು.ಮಾಳವರಿಗೂ ಇದೆಲ್ಲ ಸೋಜಿಗವಾಗಿ

ಕಂಡಿತು.ಅನಂತರ ರಥಕ್ಕೆ ನಾಲ್ಕು ಶ್ವೇತಾಶ್ವಗಳನ್ನು ಕಟ್ಟಿದರು. ರಥ ನದಿಗಿಳಿಯಿತು ನದಿಯ ನೀರೆಲ್ಲ ಅತ್ತ ಇತ್ತ ಎಳೆದಂತಾಗಿ ಹತ್ತಾರು ಮಾರು ಜಾಗಬಿಟ್ಟು ಕೊಟ್ಟಿತು ! ರಥ ಮುಂದೆ ಹೊರಟಿತು. ನೂರಾರು ಆನೆಗಳೂ ಸಹಸ್ರಾರು ಕುದುರೆಗಳೂ, ಲಕ್ಷಾಂತರ ಭಟರೂ ರಥವನ್ನು ಹಿಂಬಾಲಿಸಿದರು. ಮಿಂಚಿನ ಅಡ್ಡಗೋಡೆಯೂ ಸೈನ್ಯ ಹೊರಟ ಕಡೆ ತಾನೂ ಚಲಿಸುವ ಕೋಂಟೆಯಂತೆ ಕೋರೈಸಿತು. ! ಚಲುಕ್ಯರು ನದಿಯನ್ನು ಇಳಿದು ಪಾರಾಗುತ್ತಿರುವುದನ್ನು ಕಾಣ್ಣಾರೆ ಕಂಡು ಪರಮಾರರು ಏನು ಮಾಡುವುದಕ್ಕೂ ತೋಚದೆ ಕಂಗಾಲಾದರು. ಅನಂತರ ಬಾಣಗಳನ್ನು ತೂರುವಂತೆ ಸೇನಾನಿ ಅನುಜ್ಞೆಯಿತ್ತನು. ಅವರು ಬಿಟ್ಟ ಬಾಣಗಳು ರಪಾರನೆ ತೂರಿಬಂದು ಮಿಂಚಿನ ಕೋಟೆ ಹತ್ತಿರವಾದಂತೆ ಪುಕ್ಕ ಸುಟ್ಟ ಹಕ್ಕಿಯ ಹಾಗೆ ಅವು ದೊಪ್ಪನುರುಳಿದವು !ಒಂದೆರಡು ಘಳಿಗೆಯಲ್ಲಿ

ಚಾಲುಕ್ಯ ಸೇನೆಯೆಲ್ಲ ನದಿಯನ್ನು ದಾಟಿತು. ಮಾಳವರೂ ಈ ಸಂದರ್ಭವನ್ನು ಉಪಯೋಗಿಸಿಕೊಂಡು ನದಿ ದಾಟಲು ಪ್ರಯತ್ನಿಸಿದರು . ಆದರೆ ಮಿಂಚಿನ ಅಡ್ಡಗೋಡೆ ಜ್ವಾಲಾಮುಖಿಯಗಿ ಹೂಂಕರಿಸಿತು !ಸೈನ್ಯವೆಲ್ಲ ಪಾರಾದ ಮೇಲೆ ಅತ್ತಿಮಬ್ಬೆ ರಥದಿಂದ ಕೆಳಗಿಳಿದು ಪೂಜೆಯ ಹೂವನ್ನು ಕೈಯಲ್ಲಿ ಹಿಡಿದುಕೊಂಡು ನದಿಯಲ್ಲಿ ಹಾಕಿದಳು. ಹಾಕಿದ ತಕ್ಷಣವೇ ಮಹಾಸಾಗರಕ್ಕೆ ಸೀನು ಬಂದಂತಾಗಿ ನದಿಯ ನೀರೆಲ್ಲ ಭೋರ್ಗರೆದು ಮಾಳವರ ಮೇಲೆ ಮೊಗಚಿ ಬಿದ್ದಿತು. ಇಡೀ ಸೇನೆಗೆ ನೀರು ಅಪ್ಪಳಿಸಿ ಒದ್ದಂತಾಯಿತು !ಕನ್ನಡ ನಾಡಿನ ಎಲ್ಲೆ ಮುಗಿಯುವ ತನಕ ಅತ್ತಿಮಬ್ಬೆಯ ಮಂತ್ರಶಕ್ತಿ ಅವರನ್ನು ತರುಬಿತು !

ನರಪನ ಬೆಸದಿಂದ ಜಿನನಂ
ಶಿರದೊಳ್ ಸಲೆತಾಳ್ದಿ ದಾನಚಿಂತಾಮಣಿ ನಿ
ರ್ಭರ ಗೋದಾವರಿಯಂ ಪುಗೆ
ಪರಿಯುಡುಗಿದುಂದೆದೊಡೊಳ್ಪನದನೇವೇಳ್ವೆಂ